ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷಣೆಯವರೇ, ಮಾನ್ಯ ಸಚಿವರು ಕೊಟ್ಟ ಉತ್ತರ ಸಮರ್ಪಕವಾಗಿ ಇಲ್ಲ. ಇದು ಜನಸಾಮಾನ್ಯರಿಗೆ ಸಂಬಂಧಪಟ್ಟಿರತಕ್ಕಂಥ ವಿಚಾರ. ಇದು ಒಬ್ಬರ ಪ್ರಶ್ನೆಯಲ್ಲ. ಜನಸಾಮಾನ್ಯರ ಪ್ರಶ್ನೆಯಾಗಿರುವುದರಿಂದ ಅವರ ಮೇಲೆ ಕ್ರಮ ತೆಗೆದುಕೊಳ್ಳಲು ಅಡ್ಡಿ ಆತಂಕ ಏನಿದೆ. ಪರಿಶೀಲಿಸುತ್ತೇವೆಂದರೆ ಏನು ಅರ್ಥ? ಎಂಟುತಿಂಗಳಿಂದ ಒಂದು ಸಭೆ ಕೂಡ ನಡೆದಿಲ್ಲ.

ಉಪಾಧ್ಯಕ್ಷಣೆಯವರು : ತಾವು ಇವತ್ತು ಅವರ ಗಮನಕ್ಕೆ ತಂದಿದ್ದೀರಿ. ಅವರು ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದಾರೆ.

ಶ್ರೀ ಸಿ. ಬೈರೇಗೌಡ : ಅಡ್ಡಿ ಆತಂಕ ಏನಿದೆ, ಎಸೆನ್‌ಷಿಯಲ್ ಕಮಾಡಿಟೀಸ್ ಆಕ್ಟ್ ಪ್ರಕಾರ ಏನಾದರೂ ಒಂದು ಕ್ರಮ ತೆಗೆದುಕೊಳ್ಳುತ್ತೇವೆಂದು ಅದನ್ನಾದರೂ ಮಾನ್ಯ ಸಚಿವರು ಹೇಳಲಿ.

ಶ್ರೀಮತಿ ಮನೋರಮ ಮಧ್ವರಾಜ್ : ಮಾನ್ಯ ಸದಸ್ಯರು ಹೇಳಿದ ಹಾಗೆ ನಾವು ಅದಷ್ಟು ಬೇಗ ಒಂದು ಸಭೆಯನ್ನು ಕರೆದು ಚರ್ಚೆ ಮಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷಣೆಯವರೇ, ಇದನ್ನು ತೀವ್ರವಾಗಿ ತೆಗೆದುಕೊಳ್ಳಬೇಕು. ಏತಕ್ಕೆಂದರೆ ಲಕ್ಷಾಂತರ ಜನ ಹೋಟೆಲ್ ತಿಂಡಿಯನ್ನು ತಿಂದು ಜೀವನ ಮಾಡುತ್ತಿರುವವರ ಬಗ್ಗೆ ಸರ್ಕಾರಕ್ಕೆ ಕಾಳಜಿ ಇಲ್ಲವೆಂದರೆ ನಾವು ಇಲ್ಲಿ ಏತಕ್ಕೆ ಕುಳಿತಿರಬೇಕು.

ಉಪಾಧ್ಯಕ್ಷಣೆಯವರು : ಮಾನ್ಯ ಸಚಿವೆಯವರು ಆದಷ್ಟು ಜಾಗ್ರತೆ ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದಾರೆ.

ಶ್ರೀ ಸಿ. ಬೈರೇಗೌಡ : ಸರ್ಕಾರ ಹೋಟೆಲ್ ಮಾಲೀಕರ ಪರವಾಗಿ ಇದೆ. ಸರ್ಕಾರ ಅವರ ಹಿತವನ್ನು ಕಾಪಾಡುವ ಪ್ರಯತ್ನ ಮಾಡುತ್ತಿದೆ. ಇದು ಹೋಟೆಲ್ ಮಾಲೀಕರ ಪರವಾಗಿ ಇರತಕ್ಕಂಥ ಸರ್ಕಾರ. ಈ ಸರ್ಕಾರಕ್ಕೆ ದಿಕ್ಕಾರಹಾಕಿ ನಾನು ಹೊರಗಡೆ ಹೋಗುತ್ತಿದ್ದೇನೆ. ಸರ್ಕಾರದ ನೀತಿಗೆ ಧಿಕ್ಕಾರ ಹಾಕಿ ನಾನು ಹೊರಗಡೆ ಹೋಗುತ್ತಿದ್ದೇನೆ.

(ಮಾನ್ಯ ಶ್ರೀ ವಾಟಾಳ್ ನಾಗರಾಜ್‌ರವರು ಮತ್ತು ಮಾನ್ಯ ಸಿ.ಬೈರೇಗೌಡರು ಸರ್ಕಾರಕ್ಕೆ ಧಿಕ್ಕಾರವೆಂದು ಕೂಗುತ್ತಾ ಸಭಾತ್ಯಾಗ ಮಾಡಿದರು)

ಪೆಟ್ರೋಲ್ ಕಲಬೆರಕೆ

48 - ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪೆಟ್ರೋಲ್ ಬೆಲೆ ಏರಿಕೆಯ ತರುವಾಯ ಪೆಟ್ರೋಲ್ ಬಂಕ್‌ಗಳವರು ಪೆಟ್ರೋಲ್ ಜೊತೆಗೆ ಸೀಮೆಎಣ್ಣೆ ಬೆರೆಸುತ್ತಿರುವ ವಿಚಾರವು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಅಂತವರ ಸಂಖ್ಯೆ ಎಷ್ಟು ಹಾಗೂ ಅದರ ಮೇಲೆ ಸರ್ಕಾರದವರು ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀಮತಿ ಮನೋರಮ ಮಧ್ಯರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

ಅ) ಕೆಲವು ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿವೆ.

ಆ) ಈ ವರ್ಷ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯು ವಿವಿಧ ಪೆಟ್ರೋಲ್ ಬಂಕ್‌ಗಳಿಂದ 105 ಸ್ಯಾಂಪಲ್‌ಗಳನ್ನು ಪಡೆದು ಪರೀಕ್ಷೆಗೆ ಒಳಪಡಿಸಲಾಗಿ ಇವುಗಳಲ್ಲಿ ನಾಲ್ಕು ಕಲಬೆರಕೆ ಪ್ರಕರಣಗಳಾಗಿರುವುದು ಕಂಡು ಬಂದಿತ್ತು. (ಒಂದು ಶಿವಮೊಗ್ಗದಲ್ಲಿ ಮತ್ತು ಮೂರು ತುಮಕೂರಿನಲ್ಲಿ) 33 ಸ್ಯಾಂಪಲ್‌ಗಳಲ್ಲಿ ಕಲಬೆರಕೆ ಕಂಡು ಬಂದಿಲ್ಲ, ಮತ್ತು 68 ಸ್ಯಾಂಪಲ್‌ಗಳಿಗೆ ಸಂಬಂಧಿಸಿದಂತೆ ತಪಾಸಣಾ ವರದಿ ನಿರೀಕ್ಷಣೆಯಲ್ಲದೆ, ತಪ್ಪಿತಸ್ಥ ಡೀಲರ್‌ಗಳ ವಿರುದ್ಧ ಮೊಕದ್ದಮೆಯನ್ನು ದಾಖಲು ಮಾಡಿಕೊಂಡು ಮುಂದಿನ ಕಠಿಣ ಕ್ರಮ ಕೈಗೊಳ್ಳಲಾಗುತ್ತಿದೆ.

ಶ್ರೀ ಎಂ.ವಿ. ವೆಂಕಟಪ್ಪ : ಮಾನ್ಯ ಉಪಾಧ್ಯಕ್ಷಣೆಯವರೇ ಮಾನ್ಯ ಮಂತ್ರಿಗಳು ಉತ್ತರದಲ್ಲಿ ಈ ವರ್ಷ 105 ಸ್ಯಾಂಪಲ್ ಮಾತ್ರ ತೆಗೆದುಕೊಂಡಿದ್ದೇವೆಂದು ಹೇಳಿರುತ್ತಾರೆ. ಸುಮಾರು ನಮ್ಮ ರಾಜ್ಯದಲ್ಲಿ 1500 ಪೆಟ್ರೋಲ್ ಬಂಕ್ ಇರಬಹುದು. ಅಂದರೆ 105ಪೆಟ್ರೋಲ್ ಬಂಕ್‌ಗಳನ್ನು ಮಾತ್ರ ಚೆಕ್ ಮಾಡಿದ್ದಾರೆಂದು ಅರ್ಥವಾಯಿತು. ಇನ್ನು ಮುಂದಾದರೂ ಸಹ ಕೊನೆಯ ಪಕ್ಷ ಪೀರಿಯಾಡಿಕಲ್ ಚೆಕ್‌ಅಪ್ ಎಂದು ಪ್ರತಿವರ್ಷ 10-15 ಪೆಟ್ರೋಲ್ ಬಂಕ್ಸ್‌ಗಳನ್ನು ಏತಕ್ಕೆ ಚೆಕ್ ಅಪ್ ಮಾಡಬರದೆಂದು ಕೇಳುತ್ತೇನೆ.

ಶ್ರೀಮತಿ ಮನೋರಮ ಮದ್ವರಾಜ್ : ಮಾನ್ಯ ಅಧ್ಯಕ್ಷಣೆಯವರೇ, ಮಾನ್ಯ ಸದಸ್ಯರು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ಇವುಗಳನ್ನು ಖಂಡಿತವಾಗಿ ನಾವು ಚೆಕ್‌ಅಪ್ ಮಾಡುತ್ತೇವೆ.

ಶ್ರೀ ಎಂ.ವಿ. ವೆಂಕಟಪ್ಪ : ಡಿಸಲ್‌ನಲ್ಲಿ ಕೆರೋಸಿನ್ ಕಲಬೆರೆಕೆ ಮಾಡುತ್ತಿದ್ದಾರೆಂದು ತಿಳಿದು ಬಂದಿದೆ. ಇದರ ಬಗ್ಗೆ ತಾವು ಏನಾದರೂ ಕ್ರಮ ತೆಗೆದುಕೊಂಡಿದ್ದೀರಾ?

ಶ್ರೀಮತಿ ಮನೋರಮ ಮದ್ವರಾಜ್ : ಅದರಲ್ಲೂ ಕೂಡ ಸ್ಯಾಂಪಲ್ ತೆಗೆದುಕೊಳ್ಳುತ್ತಿದ್ದೇವೆ.

ಶ್ರೀ ಎನ್. ಚಿಕ್ಕೇಗೌಡ : ಈ ಕಲಬೆರೆಕೆ ಪ್ರಕಾರ ಸರ್ಕಾರದವರು ಅಂದರೆ ಅಧಿಕಾರಿಗಳು ಕಾನೂನು ಪ್ರಕಾರ ಶಿಸ್ತಿನ ಕ್ರಮವನ್ನು ತೆಗೆದುಕೊಂಡರೆ ಅದಕ್ಕೆ ಪ್ರತಿಭಟನೆ ಮಾಡಿ ಅವರು ಸಾಂಕೇತಿಕವಾಗಿ ಮುಚ್ಚುತ್ತೇವೆಂದು ಹೇಳಿದ್ದಾರೆ. ಅವರ ಮೇಲೆ ಏತಕ್ಕೆ ಕ್ರಮ ತೆಗೆದುಕೊಂಡು ಲೈಸೆನ್ಸ್‌ನ್ನು ರದ್ದು ಮಾಡಬರದು? ಈ ರೀತಿ ಶಿಸ್ತಿನ ಕ್ರಮ ತೆಗೆದುಕೊಂಡರೆ ಎಲ್ಲಾ ಗ್ರಾಹಕರಿಗೆ ಬೇಕಾದಂಥ ಪೆಟ್ರೋಲ್ ಮತ್ತು ಡಿಸಲ್ ಸಿಕ್ಕದಹಾಗೆ ಮಾಡುವುದರಿಂದ ಜನರಿಗೆ ಕಿರುಕುಳ ಕೊಟ್ಟಂತಾಯಿತು. ನೀವು ಇದನ್ನು ವಾಪಸ್ ತೆಗೆದುಕೊಳ್ಳಿ, ಇಲ್ಲವಾದರೆ ಆ ಅಧಿಕಾರಿಗಳನ್ನು ನಿಲ್ಲಿಸಿ ಎಂದು ಹೇಳುವುದರಲ್ಲಿ ಏನು ಅರ್ಥ ಇದೆ. ಹೀಗೆ ಹೇಳುವ ಆ ಪೆಟ್ರೋಲ್ ಬಂಕ್ ಮಾಲೀಕರುಗಳ ಮೇಲೆ ಏತಕ್ಕೆ ಕ್ರಮ ತೆಗೆದುಕೊಳ್ಳಬಾರದು?

ಶ್ರೀಮತಿ ಮನೋರಮ ಮದ್ವರಾಜ್ : ನಾವು ಪೆಟ್ರೋಲ್‌ಬಂಕ್‌ನ ಸಂಘದ ಅಧ್ಯಕ್ಷರ ಮೀಟಿಂಗನ್ನೂ ನಿನ್ನ ಚೇಂಬರ್‌ನಲ್ಲಿ 4-00 ಗಂಟೆಗೆ ಕರೆದಿದ್ದೇವೆ.

ಅವರೊಡನೆ ಮಾತನಾಡಿ ಏನು ಅವರ ಮುಂದಿನ ಕಾರ್ಯಕ್ರಮ ಎಂದು ತಿಳಿದುಕೊಂಡು ನಂತರ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎ.ಕೆ. ಅನಂತಕೃಷ್ಣ : ಪೆಟ್ರೋಲ್‌ಬಂಕ್ ಮಾಲೀಕರ ಕಡೆಯಿಂದ ಅನ್ಯಾಯವಾಗುತ್ತಿದೆ ಎಂದು ಹೇಳುತ್ತಿದ್ದಾರೆ. ಆಟೋರಿಕ್ಷಾದವರಿಂದ ಪಲ್ಯೂಷನ್ ಆಗುತ್ತಿದೆ ಎಂದರೆ ಪೆಟ್ರೋಲ್ ಬಂಕ್ ಮೇಲೆ ಹೇಳುತ್ತಿದ್ದಾರೆ. ಪಲ್ಯೂಷನ್ ಕಂಟ್ರೋಲ್ ಮೇಲೆ ಸರ್ಕಾರ ಒಂದು ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದಾಗ ಮಂತ್ರಿಗಳು ಹೋಗಬೇಕೆಂದು ಹೋರಾಟ ಮಾಡಿದರು. ಇದು ಬಹಳ ಜಟಿಲವಾದ ಪ್ರಶ್ನೆಯಾಗಿದೆ. ಆದ್ದರಿಂದ ಪೆಟ್ರೋಲ್ ಗ್ರಾಹಕರು ಯಾರಿದ್ದಾರೆ ಅವರ ಒಂದು ಸಂಘಸಂಸ್ಥೆಯೂ ಇದೆ. ಅವರನ್ನು ಬರಮಾಡಿಕೊಂಡು ಮತ್ತು ಪೆಟ್ರೋಲ್‌ಬಂಕ್ ಮಾಲೀಕರನ್ನು ಬರಮಾಡಿಕೊಂಡು ಅವರ ಮೇಲೆ ಯಾರು ನಿಯಂತ್ರಣ ಹಾಕಬೇಕೆಂದು ಇದ್ದಾರೆ, ಅವರನ್ನು ಕೂಡ ಬರಮಾಡಿಕೊಂಡು ಒಂದು ಸಮಗ್ರವಾದಂಥ ರೌಂಡ್‌ಟೇಬಲ್ ಮೀಟಿಂಗ್ ಮಾಡಿದರೆ ಮಾತ್ರ ಅನುಕೂಲವಾಗುತ್ತದೆ.

ಶ್ರೀಮತಿ ಮನೋರಮ ಮಧ್ವರಾಜ್ : ಮಾನ್ಯ ಸದಸ್ಯರ ಸಲಹೆಯಂತೆ ಮೀಟಿಂಗ್ ಕರೆಯೋಣ.

ಬೆಂಗಳೂರಿನಿಂದ ಮುಲ್ಕಿಗೆ ಸುವಿಹಾರಿ ಬಸ್

994 - ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದ್ರೆ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನಿಂದ ಮುಲ್ಕಿಗೆ ಕೆ.ಎಸ್.ಆರ್.ಟಿ.ಸಿ ಸುವಿಹಾರಿ ಬಸ್ಸು ಇಲ್ಲದೆ ಜನರಿಗೆ ತೊಂದರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು?

ಇ) ಮುಲ್ಕಿಗೆ ಫೇರ್ ಸ್ಟೇಜ್ ಇಲ್ಲದೆ ಹುಬ್ಬಳ್ಳಿ ಬೆಳಗಾಂ ಬೊಂಬಾಯಿ ಬೆಂಗಳೂರುಗಳಿಗೆ ಜನರು ಹೆಚ್ಚಿನ ಹಣ ಪಾವತಿ ಮಾಡಿ ಪ್ರಯಾಣಿಸುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಮುಲ್ಕಿ ಪುರಸಭೆಯವರು ಕೆ.ಎಸ್.ಆರ್.ಟಿ.ಸಿ ಸಂಸ್ಥೆಗೆ ಉಚಿತವಾಗಿ ಜಾಗವನ್ನು ನೀಡಿದರೂ ಸಹ ಸರ್ಕಾರದವರು ಫೇರ್ ಸ್ಟೇಜ್ ಮಾಡದಿರಲು ಕಾರಣವೇನು?

ಉ) ಮುಲ್ಕಿಯು ಪ್ರವಾಸಿ ಕೇಂದ್ರವಾಗಿದ್ದರೂ ಫೇರ್ ಸ್ಟೇಜ ಮಾಡಡಿರಲು ಕೆ.ಎಸ್.ಆರ್.ಟಿ.ಸಿಯವರು ನಿರ್ಲಕ್ಷವನ್ನು ತೋರಿಸಲು ಕಾರಣವೇನು?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) :

ಅ) ಹೌದು.

ಆ) ಪ್ರತ್ಯೇಕವಾದ ಸಾರಿಗೆಯ ಅವಶ್ಯಕತೆ ಇರುವುದಿಲ್ಲ.

ಇ) ಎಲ್ಲಾ ಕ.ರಾ.ರ.ಸಾ. ಸಂಸ್ಥೆಯ ವಾಹನಗಳಿಗೆ ಮುಲ್ಕಿಯು ಸ್ಟೇಜ್ ಪಾಯಿಂಟ್ ಆಗಿರುತ್ತದೆ. ಹೆಚ್ಚಿನ ದರ ನೀಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಉ) ಉದ್ಭವಿಸುವುದಿಲ್ಲ.